1.00 ಪಿ.ಎಂ

ಒಂದು ವೇಳೆ ಅವರು ಕಟ್ಟಲಿಕ್ಕೆ ಆಗಲಿಲ್ಲವೆಂದರೆ ಮಾನ್ಯ ಶಾಸಕರ ನೇತೃತ್ವದಲ್ಲಿ ಹತ್ತು ಮನೆಗಳನ್ನು ಕಟ್ಟಿಸಿ ಕೊಡುತ್ತೇನೆಂದು ಸ್ವಯಂ ಸೇವಾ ಸಂಘಗಳನ್ನು ಉಪಯೋಗ ಮಾಡಿಕೊಂಡು ಅಥವಾ ತಾಲ್ಲೂಕು ಪಂಚಾಯಿತಿಯ ಉಪಯೋಗ ತೆಗೆದುಕೊಂಡು ಕಟ್ಟಿ ಕೊಡುವುದಾದರೆ ಅದಕ್ಕೆ ಸ್ವಾಗತ ಇದೆ ನಾವು ಕೂಡ ಇದನ್ನು ಬೆಂಬಲಿಸುತ್ತೇವೆ.

ಶ್ರೀ ಜಯಪ್ರಕಾಶ್ ಹೆಗಡೆ : ಮಾನ್ಯ ಸಚಿವರು ಈಗೇನು ಹೇಳಿದಿರೋ ಅದಕ್ಕೆ ನಾವು ತಯಾರು ಇದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಕೂಡ ತಯಾರಿದ್ದೇವೆ. ಆಗಬಹುದು.

ಅಧ್ಯಕ್ಷರು : ಪ್ರಶ್ನೋತ್ತರ ಇಲ್ಲಿಗೆ ಮುಗಿಯಿತು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮುಂದೆ ಮಂಡಿಸಿ.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಮೂವತ್ತೇಳನೆ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ ಒಟ್ಟು 102 ಪ್ರಶ್ನೆಗಳ ಪೈಕಿ 76 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

### ಕೊರಗ ಜನಾಂಗದವರಿಗೆ ಸೌಲಭ್ಯಗಳು

4719 - ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಕೊರಗ ಜನಾಂಗದವರ ಒಟ್ಟು ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಈ ಸಮುದಾಯದ ಬಗ್ಗೆ ಅಧ್ಯಯನ ಮತ್ತು ಅಭಿವೃದ್ಧಿ ಯೋಜನೆಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲು ಸಮಿತಿಯನ್ನು ಎಂದು ನೇಮಿಸಲಾಯಿತು?*

ಇ) *ಹಾಗಿದ್ದಲ್ಲಿ ಈ ಸಮಿತಿ ತನ್ನ ವರದಿ ಸಲ್ಲಿಸಿದೆಯೆ? ಸಲ್ಲಿಸಿದ್ದಲ್ಲಿ ವರದಿಯಲ್ಲಿ ಪ್ರಸ್ತಾಪಿತ ಪ್ರಮುಖ ಅಂಶಗಳು ಯಾವುವು?*

ಈ) *ಕೊರಗ ಜನಾಂಗದ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳೇನು?*

ಉ) *ಕೊರಗ ಜನಾಂಗದವರ ಭೂ ಅಕ್ರಮಣ ಚಳುವಳಿ ಬಗ್ಗೆ ಸರ್ಕಾರದ ನಿಲುವೇನು?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1991ರ ಜನಗಣತಿ ಪ್ರಕಾರ ರಾಜ್ಯದಲ್ಲಿರುವ ಕೊರಗ ಜನಾಂಗದವರ ಸಂಖ್ಯೆ 17422 ಆಗಿರುತ್ತದೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ :

| ಕ್ರಮಸಂಖ್ಯೆ | ಜಿಲ್ಲಾ | ಕೊರಗ ಜನಾಂಗದ ಸಂಖ್ಯೆ |
|---|---|---|
| 1. | ದಕ್ಷಿಣ ಕನ್ನಡ | 6337 |
| 2. | ಉಡುಪಿ | 11085 |
| | | **17422** |

ಆ) ಈ ಜನಾಂಗದವರ ಅಧ್ಯಯನ ಸಲುವಾಗಿ ಸರ್ಕಾರದಿಂದ ಸಮಿತಿ ನೇಮಕವಾಗಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಕೊರಗ ಜನಾಂಗದ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ. ಶೈಕ್ಷಣಿಕ ಪ್ರಗತಿಗಾಗಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ಮಧ್ಯ ಕೊರಗ ಕಾಲೋನಿಯಲ್ಲಿ ಕೇಂದ್ರೀಯ ಮಾದರಿ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ. ಕೊರಗ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ, ಹೆತ್ತವರಿಗೆ ಪ್ರೋತ್ಸಾಹ ಧನ ವಿತರಣೆ, ಪಠ್ಯಪುಸ್ತಕ, ಸಮವಸ್ತ್ರ ವಿತರಣೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಆರ್ಥಿಕ ಅಭಿವೃದ್ಧಿಗಾಗಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಕಾರ್ಯಕ್ರಮಗಳು ವಸತಿ ಕಾರ್ಮಾಗಾರ ನಿರ್ಮಾಣ, ಬುಟ್ಟಿ ಹೆಣೆಯುವ ವರ್ಕ್‌ಶೆಡ್, ಸಹಕಾರ ಸಂಘಗಳಿಗೆ ಸಹಾಯಧನ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕೊರಗ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಕಾರ್ಯಕ್ರಮದಡಿಯಲ್ಲಿ ಸಂಪರ್ಕ ರಸ್ತೆ ನಿರ್ಮಾಣ, ಮನೆ, ಸಾಮೂಹಿಕ ಕುಡಿಯುವ ನೀರಿನ ಬಾವಿ, ವೈಯಕ್ತಿಕ ನೀರಾವರಿ ಬಾವಿ ಇತ್ಯಾದಿ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಅಲ್ಲದೆ ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಲಘುವಾಹನ ಚಾಲನೆ ತರಬೇತಿ ನೀಡಿ ವಾಹನವನ್ನು ಬ್ಯಾಂಕಿನ ಮೂಲಕ ಒದಗಿಸುವುದು, ಕೃಷಿ ಭೂಮಿ ಖರೀದಿಸಿ ಕೊಡುವುದು, ಗಂಗಾ ಕಲ್ಯಾಣ ಯೋಜನೆ ತರಬೇತಿ ಕಾರ್ಯಕ್ರಮದಡಿಯಲ್ಲಿ ಕಂಪ್ಯೂಟರ್ ತರಬೇತಿ, ಸೈಕಲ್ ರಿಪೇರಿ, ಹೊಲಿಗೆ ತರಬೇತಿ ಇತ್ಯಾದಿ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಉ) ಚಳುವಳಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

**ಸಂಕೇಶ್ವರ ಪಟ್ಟಣದಲ್ಲಿ ಕುಡಿಯುವ ನೀರಿನ ವಿತರಣಾ ಪೈಪ್‌ಗಳನ್ನು ಬದಲಾಯಿಸುವುದು**

4721 - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?